ಕರ್ನಾಟಕ ಸರ್ಕಾರ

ಹಿಂದೂ ಧಾರ್ಮಿಕ ಮತ್ತು ಧರ್ಮಾದಾಯ ದತ್ತಿ ಇಲಾಖೆ

ಜಿಲ್ಲಾಡಳಿತ, ಹಾಸನ

ಶ್ರೀ ಹಾಸನಾಂಬ ದೇವಾಲಯ

# ತಾಯಿ ಹಾಸನಾಂಬ ದೇವಿಯ ಸ್ಥಳ ಪುರಾಣದ ಮಾಹಿತಿ



# ತಾಯಿ ಹಾಸನಾಂಬ ದೇವಿಯ



ತಾಯಿ ಹಾಸನಾಂಬ ದೇವಿ, ಹಾಸನ

ಹಾಸನ ನಗರದಲ್ಲಿ ನೆಲೆಸಿರುವ ತಾಯಿ ಹಾಸನಾಂಬೆಯ ದೇವಸ್ಥಾನವು ಸುಮಾರು 12 ನೇ ಶತಮಾನದಲ್ಲಿ ಕೃಷ್ಣಪ್ಪನಾಯಕ ಮತ್ತು ಸಂಜೀವನಾಯಕ ಎಂಬ ಪಾಳೆಗಾರರ ಕಾಲದಲ್ಲಿ ಸ್ಥಾಪಿತವಾಗಿರುವ ಈ ದೇವಾಲಯವು ಇತರ ದೇವಾನುದೇವತೆಗಳ ಕೆತ್ತನೆಯಲ್ಲಿ ಹಾಸನಾಂಬ ದೇವಿಯು ಹುತ್ತದಲ್ಲಿ ನೆಲೆಸಿರುವ ನೋಟವನ್ನು ಇಲ್ಲಿ ಕಾಣಬಹುದು. ಮೊದಲು ಸಿಂಹಾಸನಪುರಿ ಎಂದು ಕರೆಯಲಾಗುತ್ತಿದ್ದ ಊರಿನಲ್ಲಿ ಹಾಸನಾಂಬೆ ನೆಲೆಯಾಗಿದ್ದರಿಂದ ನಗರಕ್ಕೆ "ಹಾಸನ" ಎಂಬ ಹೆಸರು ಬಂದಿದೆ.

ಸಪ್ತ ಮಾತೃಕೆಯರು ವಾರಣಾಸಿಯಿಂದ (ಕಾಶಿ) ದಕ್ಷಿಣಕ್ಕೆ ವಾಯು ವಿಹಾರಾರ್ಥವಾಗಿ ಬಂದರೆಂದೂ, ಆ ಸಪ್ತ ಮಾತೃಕೆಯರೆಂದರೆ, ಬ್ರಾಹ್ಮದೇವಿ, ಮಹೇಶ್ವರಿ, ಕೌಮಾರಿ, ವೈಷ್ಣವಿ, ವಾರಾಹಿ, ಇಂದ್ರಾಣಿ ಮತ್ತು ಚಾಮುಂಡಿ. ಈ ಸಪ್ತ ಮಾತೃಕೆಯರಲ್ಲಿ ವೈಷ್ಣವಿ, ಮಹೇಶ್ವರಿ ಮತ್ತು ಕೌಮಾರಿ ದೇವಿಯರು ಈ ದೇವಾಲಯದಲ್ಲಿ ಹುತ್ತದ ರೂಪದಲ್ಲಿ ನೆಲೆಸಿರುವರೆಂದು ಪ್ರತೀಯಂತೆ ತಿಳಿದು ಬಂದಿದೆ. ವರ್ಷಕೊಮ್ಮೆ ದೇವಿಯರ ದರ್ಶನವಿದ್ದು ತಾಯಿ ಹಾಸನಾಂಬೆ ದೇವಿಯನ್ನು ಭಕ್ತರು ಎಲ್ಲಾ ಸಮಯದಲ್ಲೂ ದರ್ಶನ ಮಾಡಲು ಸಾಧ್ಯವಿಲ್ಲ. ವರ್ಷಕ್ಕೊಂದು ಬಾರಿ ಆಶ್ವಯುಜ ಮಾಸ ಪೂರ್ಣಿಮ ನಂತರ ಬರುವ ಗುರುವಾರದಂದು ಬಾಗಿಲು ತೆರೆದರೆ ಆನಂತರ ಬಲಿಪಾಡ್ಯಮಿ ಮಾರನೇ ದಿನ ಬಾಗಿಲು ಮುಚ್ಚುವುದು, ಪುನಃ ಒಂದು ವರ್ಷದ ಕಾಲ ದೇವಿಯರ ದರ್ಶನ ಸಿಗುವುದಿಲ್ಲ. ತಾಯಿ ಹಾಸನಾಂಬ ದೇವಿಯ ವಿಶೇಷವೆಂದರೆ ನಂಬಿದ ಭಕ್ತರ ಹರಕೆಗಳನ್ನು ತೀರಿಸುವುದು ಹಾಗೂ ಅವರ ಜೀವನದಲ್ಲಿ ಹೊಸಬೆಳಕು ನೀಡಿ ಕಷ್ಟಕಾರ್ಪಣ್ಯಗಳನ್ನು ಪರಿಹರಿಸುವುದು.

ಎಲ್ಲಾ ಮೂಲೆ ಮೂಲೆಗಳಿಂದ ಭಕ್ತಾಧಿಗಳು ದೇವಿಯ ದರ್ಶನಕ್ಕೋಸ್ಕರ ಸಾಲು ಸಾಲಾಗಿ ನಿಂತು ದರ್ಶನ ಮಾಡುವ ನೋಟವು ಜಾತ್ರೆಯಂತೆ ಕಾಣುತ್ತದೆ. ಬಾಗಿಲು ತೆಗೆಯುವ ದಿವಸ ಹಾಸನದಲ್ಲಿರುವ ಎಲ್ಲಾ ತಳವಾರ ಮನೆತನದವರು ದೇವಿಯ ಗರ್ಭಗುಡಿಯ ಎದುರಿಗೆ ಬಾಳೆಕಂದನ್ನು ನೆಟ್ಟು ಹಾಸನಾಂಬೆಯನ್ನು ಭಕ್ತಿಯಿಂದ ಭಜಿಸುತ್ತಾ ಬಾಳೆಕಂದನ್ನು ಕತ್ತರಿಸಿದ ನಂತರವೇ ದೇವಿಯ ಬಾಗಿಲನ್ನು ತೆಗೆಯುವ ಪ್ರತೀತಿ ಮೊದಲಿನಿಂದಲೂ ರೂಢಿಯಲ್ಲಿದೆ.

# ಸ್ಥಳ ಪುರಾಣದ ಮಾಹಿತಿ

ಪ್ರತಿನಿತ್ಯ ದೇವಿಯ ದರ್ಶನ ಮಾಡಲು ಬರುತ್ತಿದ್ದ ಸೊಸೆಗೆ ಕಿರುಕುಳ ಕೊಡುತ್ತಿದ್ದ ಅತ್ತೆಯು ಒಂದು ದಿನ ಸೊಸೆಯನ್ನು ಹಿಂಬಾಲಿಸಿದಾಗ ಮನೆಯಿಂದ ನೇರವಾಗಿ ಬಂದು ದೇವಿಯ ಮುಂದೆ ನಿಂತು ದೇವಿಯ ಧ್ಯಾನದಲ್ಲಿ ಮಗ್ನಳಾಗಿದ್ದ ಸೊಸೆಯನ್ನು ಕಂಡು ಸಿಟ್ಟಿನಿಂದ ಮನೆಯ ಕೆಲಸ ಕಾರ್ಯಗಳಿಗಿಂತ ದೇವಿಯ ದರ್ಶನ ನಿನಗೆ ಹೆಚ್ಚಾಯಿತೇ ಎಂದು ದೇವಿಯ ಮುಂಭಾಗದಲ್ಲಿದ್ದ ಚಂದ್ರ ಬಟ್ಟಲನ್ನು ತೆಗೆದುಕೊಂಡು ತಲೆಯ ಮೇಲೆ ಕುಕ್ಕಿದ್ದರಿಂದ ನೋವನ್ನು ತಾಳಲಾರದೆ ಸೊಸೆಯು ಅಮ್ಮಾ ಹಾಸನಾಂಬೆ ಎಂದು ಭಕ್ತಿಯಿಂದ ಕೂಗಿದಾಗ ಭಕ್ತಳ ಕಷ್ಟವನ್ನು ನೋಡಲಾರದೆ ದೇವಿಯು ಅವಳ ಭಕ್ತಿಗೆ ಮೆಚ್ಚಿ ತನ್ನ ಸನ್ನಿಧಿಯಲ್ಲಿ ಯಾವಗಲೂ ಎದುರಿಗೆ ಕಾಣುವಂತಿರು ಎಂದು ಹರಸಿದ್ದರಿಂದ ಸೊಸೆಯು ಕಲ್ಲಾಗಿ ನೆಲೆಸಿದಳೆಂದು, ಪ್ರತಿ ವರ್ಷವೂ ಒಂದು ಭತ್ತದ ಕಾಳಿನ ತುದಿಯಷ್ಟು ದೇವಿಯ ಕಡೆ ಚಲಿಸುವಳೆಂದೂ, ದೇವಿಯ ಪಾದ ತಲುಪಿದ ಕ್ಷಣದಲ್ಲೇ ಕಲಿಯುಗದ ಅಂತ್ಯ ಎನ್ನುವ ವಾಡಿಕೆ ಮೊದಲಿಂದಲೂ ಸಹ ಕೇಳಿ ಬಂದಿದೆ. ಅತ್ತೆಮನೆ ಸೊಸೆ ಕಲ್ಲಾಗಿ ನೆಲೆಸಿರುವ ಈ ದೃಷ್ಯವನ್ನು ಈಗಲೂ ಕಣ್ಣಾರೆ ಕಾಣಬಹುದು.

ದೇವಿಯ ಮೇಲಿರುವ ಆಭರಣಗಳನ್ನು ಅಪಹರಿಸಲೆಂದು ನಾಲ್ಕು ಮಂದಿ ಕಳ್ಳರು ಪ್ರವೇಶಿಸಿ, ಆಭರಣಗಳನ್ನು ತೆಗೆಯಲು ಹೋದಾಗ ಕೋಪಿತಳಾದ ದೇವಿಯು ಶಾಪಕೊಟ್ಟಾಗ ಈ ನಾಲ್ಕು ಮಂದಿ ಕಳ್ಳರು ಕಲ್ಲಾಗಿದ್ದು, ಇಂದಿಗೂ ಇವುಗಳನ್ನು ಕಾಣಬಹುದು, ಈ ಗುಡಿಯನ್ನು ಕಳ್ಳಪ್ಪನ ಗುಡಿ ಎಂದು ಕರೆಯುತ್ತಾರೆ.



ಕಳ್ಳಪ್ಪನ ಗುಡಿ, (ದೇವಸ್ಥಾನ ಮುಂಭಾಗ) ಹಾಸನ



ಶ್ರೀ ಸಿದ್ದೇಶ್ವರಸ್ವಾಮಿ ದೇವಸ್ಥಾನ, ಹಾಸನ

ತಾಯಿ ಹಾಸನಾಂಬೆಯ ದೇವಾಲಯದ ದ್ವಾರದಿಂದ ಒಳಪ್ರವೇಶಿಸಿದ ತಕ್ಷಣವೇ ಮೊದಲು ನೋಡಬಹುದಾದ ಶ್ರೀ ಸಿದ್ದೇಶ್ವರಸ್ವಾಮಿಯ ದೇವಾಲಯವು ಸುಂದರ ರೂಪದಲ್ಲಿದೆ. ಈ ದೇವಾಲಯದಲ್ಲಿ ಸಿದ್ದೇಶ್ವರ ಸ್ವಾಮಿಯನ್ನು ಲಿಂಗರೂಪದಲ್ಲಿ ಮತ್ತು ಉದ್ಭವ ಮೂರ್ತಿಯಂತೆ ಅರ್ಜುನನಿಗೆ ಈಶ್ವರನು ಪಾಶುಪತಾಸ್ತ್ರ ಕೊಡುವ ಆಕಾರದಲ್ಲಿದೆ. ಉದ್ಭವ ಮೂರ್ತಿಯ ಹಣೆಯ ಮೇಲೆ ಜಿನುಗುವ ರೂಪದಲ್ಲಿ ಪ್ರತೀ ವರ್ಷವೂ ವಿಶೇಷವಾಗಿ ನೋಡಬಹುದಾಗಿದೆ.

..... ಮುಂದುವರೆದಂತೆ

ಪ್ರತೀ ವರ್ಷ ಆಶ್ವಯುಜ ಮಾಸದ ಕೃಷ್ಣಾಪಕ್ಷದ ಪ್ರಥಮ ದ್ವಿತೀಯ ಹೊರತುಪಡಿಸಿ ಬರುವ ಗುರುವಾರದಂದು ದೇವಾಲಯದ ಗರ್ಭಗುಡಿಯ ಬಾಗಿಲು ತೆಗೆದು (ದೀಪಾವಳಿ ಕಾಲದಲ್ಲಿ) ಸಾಂಪ್ರದಾಯಿಕ ವಿಧಿ ವಿಧಾನದಂತೆ ಕನಿಷ್ಠ 9 ದಿನ ಗರಿಷ್ಠ 15 ದಿನಗಳವರೆಗೆ ತಾಯಿ ಹಾಸನಾಂಬೆ ದೇವಿಯ ದರ್ಶನವಿದ್ದು ನಂತರ ಯಮದ್ವಿತೀಯ ದಿನದಂದು ಬಾಗಿಲು ಮುಚ್ಚಿದಂತೆ, ಇತರೆ ದಿನಗಳಲ್ಲಿ ದೇವಾಲಯದಲ್ಲಿರುವ ದೇವರ ಪಾದಗಳು ಹಾಗೂ ಗರ್ಭಗುಡಿ ದ್ವಾರಕ್ಕೆ ನಿತ್ಯ ಪೂಜೆ, ಸಪ್ತಹ ಪೂಜೆ ಮತ್ತು ಮಾಸಿಕ ಪೂಜೆಗಳು ನಡೆಯುತ್ತವೆ.







ತಾಯಿ ಕೆಂಚಾಂಬ ದೇವಿ, ಕೆಂಚಮ್ಮನ ಹೊಸಕೋಟೆ